# ಅಜ್ಜಿ ಕಳೆದುಕೊಂಡ ವಸ್ತು



ಒಂದು ಊರಿನಲ್ಲಿ ಒಬ್ಬ ಬಾಲಕನಿದ್ದ. ಅವನ ಹೆಸರು ಕೃಷ್ಣ. ಅವನು ಬಹಳ ಕಿಡಿಗೇಡಿಯಾಗಿದ್ದನು. ವಯಸ್ಸಾದವರನ್ನೂ, ಅಶಕ್ತರನ್ನು ಕಂಡು ಹೀಯಾಳಿಸುವುದು, ಅವರನ್ನು ಕುರಿತು ಕುಹಕವಾಡುವುದು ಮಾಡುತ್ತಿದ್ದನು. ಆದ್ದರಿಂದ ಜನರು ಅವನನ್ನು ಕೀಡಿಗೇಡಿ ಕಿಟ್ಟಿ ಎಂದೇ ಕರೆಯುತ್ತಿದ್ದರು.

ಒಂದು ಮಧ್ಯಾಹ್ನ ಬಿಸಿಲಿನ ತಾಪ ಪ್ರಖರವಾಗಿತ್ತು. ಒಬ್ಬಳು ಅಜ್ಜಿ ತುಂಬಾ ಬಾಗಿಕೊಂಡು ಕೋಲನ್ನೂರಿಕೊಂಡು ಬೀದಿಯಲ್ಲಿ ಸಾಗುತ್ತಿದ್ದಳು. ಅವಳ ಬಾಗಿದ ದೇಹ, ನಡೆಯುತ್ತಿರುವ ರೀತಿ ಕಂಡು ಕಿಟ್ಟಿ ಅವಳನ್ನು ಗೋಳು ಹೊಯ್ದುಕೊಳ್ಳಲು ಸಿದ್ಧನಾಗಿ ಅಜ್ಜಿಯ ಹತ್ತಿರ ಬಂದನು. ಅವಳನ್ನು ಕಂಡು 'ಅಜ್ಜೀ ಅಜ್ಜೀ, ಇಂತಹ ಸುಡುಬಿಸಿಲಿನಲ್ಲಿ ಹೀಗೆ ಬಾಗಿಕೊಂಡು ಏನನ್ನು ಹುಡುಕುತ್ತಿರುವೆ?' ಎಂದು ಕುಹಕದ ಪ್ರಶ್ನೆ ಕೇಳಿದನು.

ಅಜ್ಜಿಗೆ ಇವನ ಕುಹಕ ಬುದ್ಧಿಯ ಹಿಂದಿನ ಉದ್ದೇಶ ಅರ್ಥವಾಯಿತು. ಅದನ್ನು ತೋರಗೊಡದೇ ಶಾಂತ ಚಿತ್ತದಿಂದಲೇ 'ಮಗು ಈ ಹಾದಿಯಲ್ಲಿ ನಾನು ಒಂದು ಅಮೂಲ್ಯವಾದ ವಸ್ತುವನ್ನು ಕಳೆದುಕೊಂಡಿದ್ದೇನೆ. ಅದನ್ನು ಹುಡುಕುತ್ತಿದ್ದೇನೆ' ಎಂದಳು.

ಅಜ್ಜಿಯ ಉತ್ತರ ಕೇಳಿ ಕಿಟ್ಟಿಗೆ ಆಶ್ಚರ್ಯವಾಯಿತು. ಆದರೂ ಅದನ್ನು ತಡೆದುಕೊಂಡು 'ಅಜ್ಜೀ ನೀನು ಯಾವ ಅಮೂಲ್ಯವಾದ ವಸ್ತುವನ್ನು ಕಳೆದುಕೊಂಡಿರುವೆ. ಸ್ವಲ್ಪ ವಿವರಿಸಬಾರದೇ. ನಾನು ನಿನ್ನ ವಸ್ತುವನ್ನು ಹುಡುಕಿ ಕೊಡುವೆ' ಎಂದನು.

'ಮಗು ನಾನು ಕಳೆದುಕೊಂಡ ವಸ್ತುವನ್ನು ನೀನು ಹುಡುಕಿ ಕೊಡಲಾರೆ. ನೀನು ಸೋತರೆ ನೀನು ಅಶಕ್ತರ ಜೊತೆ, ಹಿರಿಯರ ಜೊತೆ ಮಾಡುವ ಕೀಟಲೆಗಳನ್ನು, ಕುಹಕಗಳನ್ನು ನಿಲ್ಲಿಸಬೇಕು' ಎಂದಳು.

'ಆಯಿತು ಅಜ್ಜಿ. ಯಾವ ವಸ್ತುವನ್ನು ಕಳೆದುಕೊಂಡಿರುವೆ ಹೇಳು. ಅದನ್ನು ಹುಡುಕಿ ಕೊಡದಿದ್ದರೆ ಇನ್ನು ಮುಂದೆ ಯಾರನ್ನು ಕುರಿತೂ ಕುಹಕ ಆಡುವುದಿಲ್ಲ' ಎಂದನು.

ಆಗ ಅಜ್ಜಿ ನಯವಾಗಿ 'ಮಗು ನಾನು ನನ್ನ ಅಮೂಲ್ಯವಾದ ಯೌವನವನ್ನು ಕಳೆದುಕೊಂಡಿದ್ದೇನೆ. ಅದನ್ನೇ ಹುಡುಕುತ್ತಿದ್ದೇನೆ. ಅದನ್ನು ಹುಡುಕಿ ಕೊಡಬಲ್ಲೆಯಾ?' ಎಂದಳು. ಅವಳ ಉತ್ತರ ಕೇಳಿ ಬಾಲಕ ನಾಚಿಕೊಂಡ.

'ಮಗು ಬಾಲ್ಯ, ಯೌವನ ಮತ್ತು ವೃದ್ಧಾಪ್ಯ ಜೀವನದಲ್ಲಿ ಎಲ್ಲರಿಗೂ ಬರುವ ಮೂರು ಅವಸ್ಥೆಗಳು. ಅವು ಕಾಲಕ್ರಮೇಣ ಜಾರಿ ಹೋಗುವಂತಹವು. ದೇಹವು ಅದಕ್ಕನುಗುಣವಾಗಿ ಬಾಗುವುದು ಸಹಜವಲ್ಲವೇ?' ಎಂದಳು.

ಅಜ್ಜಿಯ ಮಾತು ಬಾಲಕನನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿತು. ಅವಮಾನದಿಂದ ಕುಗ್ಗಿಹೋದ. ತಾನು ಇದುವರೆಗೂ ಮಾಡಿದ್ದು ತಪ್ಪು ಎಂಬುದು ಅರಿವಾಯಿತು. ಅಂದಿನಿಂದ ಕಿಟ್ಟಿ ಕುಹಕವಾಡುವುದನ್ನು, ಕೀಟಲೆ ಮಾಡುವುದನ್ನು ನಿಲ್ಲಿಸಲು ತೀರ್ಮಾನಿಸಿದ. ಸಾಧ್ಯವಾದಷ್ಟು ಜನರಿಗೆ ಸಹಾಯ ಮಾಡಲು ಮುಂದಾದ. ಅಂದಿನಿಂದ ಅವನ ಬದಲಾದ ನಡವಳಿಕೆ ಕಂಡು ಜನರು 'ಉಪಕಾರಿ ಕಿಟ್ಟಿ' ಎಂದು ಕರೆಯತೊಡಗಿದರು.

**(ಸಂಗ್ರಹ) ಕೆ.ಪಿ. ರಾಮಗುಂಡಿ,**
**ಬೈಲಹೊಂಗಲ**

## ನಿಮಗೆಷ್ಟು ಗೊತ್ತು

# ಬಿಲ ತೋಡುವ ಗಣಿಗಾರಲು

ಇತರೆ ಹಕ್ಕಿಗಳಂತೆ ಇವುಗಳಿಗೆ ಮರದ ಮೇಲೆ ಗೂಡು ನಿರ್ಮಿಸುವ ಅಭ್ಯಾಸವಿಲ್ಲ. ನದಿಗಳ ತೀರಗಳ ದಂಡೆಯಲ್ಲಿ ಭೂಮಿಗೆ ಸಮಾನಾಂತರವಾಗಿ ರಂಧ್ರ ಕೊರೆದು ಬಿಲದ ರೂಪದ ಗೂಡು ಮಾಡುತ್ತವೆ. ಕೆಲವೊಮ್ಮೆ ಸಾಮೂಹಿಕವಾಗಿ ಅನೇಕ ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ. ಸ್ವಲ್ಪ ಸಡಿಲವಾದ ಮಣ್ಣು ಅಥವಾ ಮರಳು ಮಿಶ್ರಿತ ಮಣ್ಣಿನ ಕಡಿದಾದ ಭೂಭಾಗದಲ್ಲಿ ಬಿಲದ ರೂಪದ ಗೂಡನ್ನು ಸಿದ್ಧಪಡಿಸುತ್ತವೆ. ಗಣಿಗಾರಲು ಹಕ್ಕಿಯ ಬಿಲ ಒಂದು ಮೀಟರ್‌ನಷ್ಟು ಉದ್ದವಿದ್ದು, ಬಿಲದ ತುದಿಯಲ್ಲಿ ಮೊಟ್ಟೆಯಿಡುವ ಕೋಣೆಯನ್ನು ಹೊಂದಿರುತ್ತದೆ. ಮರಿಗಳು ದೊಡ್ಡದಾಗುವ ತನಕ ಅವುಗಳನ್ನು ಬಿಲದಲ್ಲಿಯೇ ಪೋಷಣೆ ಮಾಡುತ್ತವೆ.

**-ಪ.ನಾ.ಹಳ್ಳಿ.ಹರೀಶ್ ಕುಮಾರ್**

